# ಕೋಲ್ ಇಂಡಿಯಾ (ವರ್ಗಾವಣೆಗಳ ಮತ್ತು ಸಿಂಧುತ್ವದ ವಿನಿಯಮನ) ಅಧಿನಿಯಮ, 2000

(13.02.09ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 39ನೇ ಸಂಪುಟದ 1ನೇ ಸಂಚಿಕೆಯಲ್ಲಿ 82 ರಿಂದ 83ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು
2. ಪರಿಭಾಷೆಗಳು
3. ಭೂಮಿಯ, ಹಕ್ಕುಗಳ, ಹಕ್ಕುಸ್ವಾಮ್ಯದ ಅಥವಾ ಹಿತಾಸಕ್ತಿಯ ವರ್ಗಾವಣೆಯನ್ನು ನಿರ್ದೇಶಿಸಲು ಕೇಂದ್ರ ಸರ್ಕಾರದ ಅಧಿಕಾರ
4. ಕೆಲವು ವರ್ಗಾವಣೆಗಳ ಸಿಂಧುತ್ವ

# ಕೋಲ್ ಇಂಡಿಯಾ (ವರ್ಗಾವಣೆಗಳ ಮತ್ತು ಸಿಂಧುತ್ವದ ವಿನಿಯಮನ) ಅಧಿನಿಯಮ, 2000

(2000ದ ಅಧಿನಿಯಮ ಸಂಖ್ಯೆ 45)

[8ನೇ ಡಿಸೆಂಬರ್, 2001]

ಕೋಲ್ ಇಂಡಿಯಾ ಲಿಮಿಟೆಡ್‌ನಲ್ಲಿ ಅಥವಾ ಒಂದು ಸಹಾಯಕ ಕಂಪನಿಯಲ್ಲಿ ನಿಹಿತಗೊಂಡ, ಕಲ್ಲಿದ್ದಲು ಗಣಿಗೆ, ಕಲ್ಲಿದ್ದಲು ಕಿಟ್ಟ ತಯಾರಿಕೆ ಗಣಿಗೆ ಅಥವಾ ಕಲ್ಲಿದ್ದಲು ಕಿಟ್ಟ ಭಟ್ಟಿ ಸ್ಥಾವರಕ್ಕೆ ಸಂಬಂಧಿಸಿದ ಭೂಮಿಯನ್ನು ಅಥವಾ ಭೂಮಿಯಲ್ಲಿನ ಅಥವಾ ಭೂಮಿಯ ಮೇಲಿನ ಹಕ್ಕುಗಳನ್ನು ಅಥವಾ ಹಕ್ಕನ್ನು, ಹಕ್ಕು ಸ್ವಾಮ್ಯವನ್ನು ಮತ್ತು ಹಿತಾಸಕ್ತಿಗಳನ್ನು ಕೋಲ್ ಇಂಡಿಯಾ ಲಿಮಿಟೆಡ್‌ನ ಯಾವುದೇ ಸಹಾಯಕ ಕಂಪನಿಗೆ ಅಥವಾ ಇತರ ಸಹಾಯಕ ಕಂಪನಿಗೆ ವರ್ಗಾವಣೆ ಮಾಡುವುದನ್ನು ನಿರ್ದೇಶಿಸಲು ಮತ್ತು ಅಂಥ ಭೂಮಿಯ ಅಥವಾ ಹಕ್ಕುಗಳ ಕೆಲವು ವರ್ಗಾವಣೆಗಳನ್ನು ಸಿಂಧುಗೊಳಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರ ನೀಡುವ ಅಧಿನಿಯಮ.

ಭಾರತ ಗಣರಾಜ್ಯದ ಐವತ್ತೊಂದನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು.–** ಈ ಅಧಿನಿಯಮವನ್ನು ಕೋಲ್ ಇಂಡಿಯಾ (ವರ್ಗಾವಣೆಗಳ ಮತ್ತು ಸಿಂಧುತ್ವದ ವಿನಿಯಮನ) ಅಧಿನಿಯಮ, 2000 ಎಂದು ಕರೆಯತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಕೋಲ್ ಇಂಡಿಯಾ"** ಎಂದರೆ ಕಂಪನಿಗಳ ಅಧಿನಿಯಮ, 1956 (1956ರ 1)ರ ಮೇರೆಗೆ ನಿಗಮಿತಗೊಳಿಸಿದ, ಕೋಲ್ಕೊತ್ತಾದಲ್ಲಿ ಅದರ ನೋಂದಾಯಿತ ಕಚೇರಿಯನ್ನು ಹೊಂದಿರುವ ಸರ್ಕಾರಿ ಕಂಪನಿಯಾಗಿರುವ ಕೋಲ್ ಇಂಡಿಯಾ ಲಿಮಿಟೆಡ್ ಎಂದು ಅರ್ಥ ಮತ್ತು ಇದು ಅದರ, ಹಿಂದೆ ಇದ್ದಂತಹ ಸರ್ಕಾರಿ ಕಂಪನಿಯನ್ನು, ಎಂದರೆ ದಿ ಕೋಲ್ ಮೈನ್ಸ್ ಅಥಾರಿಟಿ ಲಿಮಿಟೆಡ್ ಇದನ್ನು ಒಳಗೊಳ್ಳುತ್ತದೆ;

(ಬಿ) **"ಸಹಾಯಕ ಕಂಪನಿ"** ಎಂದರೆ ಕೋಲ್ ಇಂಡಿಯಾದ ಈ ಕೆಳಕಂಡ ಸಹಾಯಕ ಕಂಪನಿಗಳು, ಎಂದರೆ: –

(i) ದಿ ಸೆಂಟ್ರಲ್ ಕೋಲ್ ಫೀಲ್ಡ್ಸ್ ಲಿಮಿಟೆಡ್, ರಾಂಚಿ ಮತ್ತು ಇದರಲ್ಲಿ ಅದರ ಹಿಂದೆ ಇದ್ದಂತಹ ಸರ್ಕಾರಿ ಕಂಪನಿಯು ಎಂದರೆ, ನ್ಯಾಷನಲ್ ಕೋಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್, ರಾಂಚಿ ಒಳಗೊಳ್ಳುತ್ತದೆ;

(ii) ದಿ ಭಾರತ್ ಕೋಕಿಂಗ್ ಕೋಲ್ ಲಿಮಿಟೆಡ್, ಧನಬಾದ್;

(iii) ದಿ ವೆಸ್ಟರ್ನ್ ಕೋಲ್ ಫೀಲ್ಡ್ಸ್ ಲಿಮಿಟೆಡ್, ನಾಗಪುರ;

(iv) ದಿ ಈಸ್ಟರ್ನ್ ಕೋಲ್ ಫೀಲ್ಡ್ಸ್ ಲಿಮಿಟೆಡ್, ಸ್ಯಾಂಕ್ಟೋರಿಯಾ;

(v) ದಿ ಸೆಂಟ್ರಲ್ ಮೈನ್ ಪ್ಲಾನಿಂಗ್ ಅಂಡ್ ಡಿಸೈನ್ ಇನ್‌ಸ್ಟಿಟ್ಯೂಟ್ ಲಿಮಿಟೆಡ್, ರಾಂಚಿ;

(vi) ದಿ ಸೌತ್ ಈಸ್ಟರ್ನ್ ಕೋಲ್ ಫೀಲ್ಡ್ಸ್ ಲಿಮಿಟೆಡ್ ಬಿಲಾಸ್‌ಪುರ;

(vii) ದಿ ನಾರ್ದರನ್ ಕೋಲ್ ಫೀಲ್ಡ್ಸ್ ಲಿಮಿಟೆಡ್, ಸಿಂಗರೌಲಿ;

(viii) ದಿ ಮಹಾನದಿ ಕೋಲ್ ಫೀಲ್ಡ್ಸ್ ಲಿಮಿಟೆಡ್, ಸಂಬಲ್ಪುರ;

– ಮತ್ತು ಕಂಪನಿಗಳ ಅಧಿನಿಯಮ, 1956 (1956ರ 1)ರ ಮೇರೆಗೆ ಕಾಲಕಾಲಕ್ಕೆ ನಿಗಮಿತಗೊಳಿಸಬಹುದಾದಂತೆ ಕೋಲ್ ಇಂಡಿಯಾದ ಅಂಥ ಇತರ ಸಹಾಯಕ ಕಂಪನಿಯನ್ನು ಒಳಗೊಳ್ಳುತ್ತದೆ;

(ಸಿ) ಇದರಲ್ಲಿ ಉಪಯೋಗಿಸಿದ ಮತ್ತು ಪರಿಭಾಷಿಸಿರದ ಆದರೆ, ಕಲ್ಲಿದ್ದಲು ಕಿಟ್ಟ ತಯಾರಿಕೆ ಗಣಿಗಳ (ರಾಷ್ಟ್ರೀಕರಣ) ಅಧಿನಿಯಮ, 1972 (1972ರ 36)ರಲ್ಲಿ ಅಥವಾ ಕಲ್ಲಿದ್ದಲು ಗಣಿಗಳ (ರಾಷ್ಟ್ರೀಕರಣ) ಅಧಿನಿಯಮ, 1973 (1973ರ 26)ರಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮಗಳಲ್ಲಿ ಅನುಕ್ರಮವಾಗಿ ಅವುಗಳಿಗೆ ಗೊತ್ತುಪಡಿಸಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ಭೂಮಿಯ, ಹಕ್ಕುಗಳ, ಹಕ್ಕು ಸಾಮ್ಯದ ಅಥವಾ ಹಿತಾಸಕ್ತಿಯ ವರ್ಗಾವಣೆಯನ್ನು ನಿರ್ದೇಶಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಕೇಂದ್ರ ಸರ್ಕಾರವು ವಿಧಿಸುವುದು ಉಚಿತವೆಂದು ಭಾವಿಸುವಂಥ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಪಾಲಿಸಲು ಸಹಾಯಕ ಕಂಪನಿಯು, ಸಮ್ಮತಿಸುತ್ತಿದೆ ಅಥವಾ ಪಾಲಿಸಿದೆ ಎಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ಅದು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಕೋಲ್ ಇಂಡಿಯಾದಲ್ಲಿ ನಿಹಿತವಾದ ಕಲ್ಲಿದ್ದಲು ಗಣಿ, ಕಲ್ಲಿದ್ದಲು ಕಿಟ್ಟ ತಯಾರಿಕೆ ಗಣಿ ಅಥವಾ ಕಲ್ಲಿದ್ದಲು ಕಿಟ್ಟ ಭಟ್ಟಿ ಸ್ಥಾವರಕ್ಕೆ ಸಂಬಂಧಿಸಿದಂತೆ ಭೂಮಿಯನ್ನು ಅಥವಾ ಅಂಥ ಭೂಮಿಯಲ್ಲಿನ ಅಥವಾ ಭೂಮಿಯ ಮೇಲಿನ ಹಕ್ಕುಗಳನ್ನು ಅಥವಾ ಹಕ್ಕನ್ನು, ಹಕ್ಕುಸ್ವಾಮ್ಯವನ್ನು ಮತ್ತು ಹಿತಾಸಕ್ತಿಯನ್ನು, ಕೋಲ್ ಇಂಡಿಯಾದಲ್ಲಿ ನಿಹಿತಗೊಳಿಸುವುದನ್ನು ಮುಂದುವರಿಸುವುದರ ಬದಲಾಗಿ, ಆ ಸಹಾಯಕ ಕಂಪನಿಯಲ್ಲಿ ಅಥವಾ ಅಂಥ ಭೂಮಿ ಅಥವಾ ಹಕ್ಕು, ಹಕ್ಕುಸಾಮ್ಯ ಅಥವಾ ಹಿತಾಸಕ್ತಿಯು ಸಹಾಯಕ ಕಂಪನಿಯಲ್ಲಿ ನಿಹಿತವಾಗಿದ್ದಲ್ಲಿ ಇನ್ನೊಂದು ಸಹಾಯಕ ಕಂಪನಿಯಲ್ಲಿ ನಿಹಿತಗೊಳಿಸತಕ್ಕದ್ದೆಂದು ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಕಲ್ಲಿದ್ದಲು ಗಣಿ, ಕಲ್ಲಿದ್ದಲು ಕಿಟ್ಟ ತಯಾರಿಕೆ ಗಣಿ ಅಥವಾ ಕಲ್ಲಿದ್ದಲು ಕಿಟ್ಟ ಭಟ್ಟಿ ಸ್ಥಾವರಕ್ಕೆ ಸಂಬಂಧಿಸಿದಂತೆ ಭೂಮಿಯನ್ನು ಅಥವಾ ಅಂಥ ಭೂಮಿಯಲ್ಲಿನ ಅಥವಾ ಭೂಮಿಯ ಮೇಲಿನ ಹಕ್ಕುಗಳನ್ನು ಅಥವಾ ಹಕ್ಕನ್ನು, ಹಕ್ಕುಸ್ವಾಮ್ಯವನ್ನು ಮತ್ತು ಹಿತಾಸಕ್ತಿಯನ್ನು ಸಹಾಯಕ ಕಂಪನಿಯಲ್ಲಿ ನಿಹಿತಗೊಳಿಸಿದಲ್ಲಿ, ಅಂಥ ಸಹಾಯಕ ಕಂಪನಿಯು, ಅಂಥ ನಿಹಿತಗೊಳಿಸುವ ದಿನಾಂಕದಂದು ಮತ್ತು ದಿನಾಂಕದಿಂದ, ಅಂಥ ಕಲ್ಲಿದ್ದಲು ಗಣಿ ಅಥವಾ ಕಲ್ಲಿದ್ದಲು ಕಿಟ್ಟ ತಯಾರಿಕೆ ಗಣಿಗೆ ಸಂಬಂಧಿಸಿದಂತೆ ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ವಿನಿಯಮನ) ಅಧಿನಿಯಮ, 1957 (1957ರ 67)ರ 13ನೇ ಪ್ರಕರಣದ ಮೇರೆಗೆ ರಚಿಸಿದ ಖನಿಜಗಳ ರಿಯಾಯಿತಿ ನಿಯಮಗಳು, 1960ರ ಮೇರೆಗೆ, ಅಂಥ ಕಲ್ಲಿದ್ದಲು ಗಣಿ ಅಥವಾ ಕಲ್ಲಿದ್ದಲು ಕಿಟ್ಟ ತಯಾರಿಕೆ ಗಣಿಗೆ ಸಂಬಂಧಿಸಿದಂತೆ ಹೊಸ ಗಣಿ ಗುತ್ತಿಗೆಯನ್ನು, ಆ ನಿಯಮಗಳ ಮೇರೆಗೆ ಅಂಥ ಗುತ್ತಿಗೆಯನ್ನು ಮಂಜೂರು ಮಾಡಬಹುದಾಗಿದ್ದ ಗರಿಷ್ಠ ಅವಧಿಗಾಗಿ ಮಂಜೂರು ಮಾಡಿದ್ದರೆ ಹೇಗೋ ಹಾಗೇ ಗುತ್ತಿಗೆದಾರನಾಗಿರುವನೆಂದು ಭಾವಿಸತಕ್ಕದ್ದು ಮತ್ತು ಅಂಥ ಕಲ್ಲಿದ್ದಲು ಗಣಿ ಅಥವಾ ಕಲ್ಲಿದ್ದಲು ಕಿಟ್ಟ ತಯಾರಿಕೆ ಗಣಿಗೆ ಸಂಬಂಧಿಸಿದಂತೆ ಕೋಲ್ ಇಂಡಿಯಾದ ಅಥವಾ ಸಂದರ್ಭಾನುಸಾರ, ಸಹಾಯಕ ಕಂಪನಿಯ ಎಲ್ಲ ಹಕ್ಕುಗಳು ಮತ್ತು ಬಾಧ್ಯತೆಗಳು ಅಂಥ ನಿಹಿತಗೊಳಿಸುವ ದಿನಾಂಕದಂದು ಮತ್ತು ಆ ದಿನಾಂಕದಿಂದ ಅನುಕ್ರಮವಾಗಿ ಮೊದಲು ನಮೂದಿಸಿದ ಕಂಪನಿಯ ಹಕ್ಕುಗಳು ಮತ್ತು ಬಾಧ್ಯತೆಗಳಾಗಿರುತ್ತವೆಂದು ಭಾವಿಸತಕ್ಕದ್ದು.

**4. ಕೆಲವು ವರ್ಗಾವಣೆಗಳ ಸಿಂಧುತ್ವ.–** ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಕೋಲ್ ಇಂಡಿಯಾ ಅಥವಾ ಯಾವುದೇ ಇತರ ಸಹಾಯಕ ಕಂಪನಿಯಲ್ಲಿ ನಿಹಿತವಾಗಿದ್ದ ಯಾವುದೇ ಕಲ್ಲಿದ್ದಲು ಗಣಿ, ಕಲ್ಲಿದ್ದಲು ಕಿಟ್ಟ ತಯಾರಿಕೆ ಗಣಿ ಅಥವಾ ಕಲ್ಲಿದ್ದಲು ಕಿಟ್ಟ ಭಟ್ಟಿ ಸ್ಥಾವರವನ್ನು ನಿರ್ವಹಿಸುತ್ತಿದ್ದ ಅಥವಾ ಅವುಗಳ ಮೇಲೆ ನಿಯಂತ್ರಣ ಹೊಂದಿದ್ದ ಸಹಾಯಕ ಕಂಪನಿಯಲ್ಲಿ, ಅಂಥ ಕಲ್ಲಿದ್ದಲು ಗಣಿ, ಕಲ್ಲಿದ್ದಲು ಕಿಟ್ಟ ತಯಾರಿಕೆ ಗಣಿ ಅಥವಾ ಕಲ್ಲಿದ್ದಲು ಕಿಟ್ಟ ಭಟ್ಟಿ ಸ್ಥಾವರಕ್ಕೆ ಸಂಬಂಧಿಸಿದಂತೆ ಭೂಮಿಯನ್ನು ಅಥವಾ ಅಂಥ ಭೂಮಿಯಲ್ಲಿನ ಅಥವಾ ಭೂಮಿಯ ಮೇಲಿನ ಹಕ್ಕುಗಳು ಅಥವಾ ಹಕ್ಕು, ಹಕ್ಕುಸ್ವಾಮ್ಯ ಮತ್ತು ಹಿತಾಸಕ್ತಿಯು ನಿಹಿತವಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಅಂಥ ನಿಹಿತಗೊಳಿಸುವಿಕೆಯು 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ನಿರ್ದೇಶನ ನೀಡಿದ್ದರೆ ಹೇಗೋ ಹಾಗೆ ಎಲ್ಲಾ ನಿರ್ದಿಷ್ಟ ಕಾಲಗಳಲ್ಲಿ ಸಿಂಧುವಾಗಿರುವುದೆಂದು ಮತ್ತು ಪರಿಣಾಮಕಾರಿಯಾಗಿರುವುದ್ದೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅಂಥ ಸಹಾಯಕ ಕಂಪನಿಯು ಅಂಥ ಕಲ್ಲಿದ್ದಲು ಗಣಿಯನ್ನು, ಕಲ್ಲಿದ್ದಲು ಕಿಟ್ಟ ತಯಾರಿಕೆ ಗಣಿಯನ್ನು ಅಥವಾ ಕಲ್ಲಿದ್ದಲು ಕಿಟ್ಟ ಭಟ್ಟಿ ಸ್ಥಾವರವನ್ನು ನಿರ್ವಹಿಸಲು ಅಥವಾ ನಿಯಂತ್ರಿಸಲು ಸಕ್ಷಮವಾಗಿಲ್ಲವೆಂಬ ಕಾರಣದ ಮೇಲೆ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ, ನಡೆಸತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ.

* * *